ಬೆಳಗಾವಿ ಮತ್ತು ಧಾರವಾಡ ನಡುವಿನ ಕಿತ್ತೂರು ಮಾರ್ಗದ 73 ಕಿಮೀ ಉದ್ದದ ಹೊಸ ರೈಲು ಮಾರ್ಗಕ್ಕೆ ಒಟ್ಟು 581 ಹೆಕ್ಟೇರ್‌ಭೂಮಿಯ ಅಗತ್ಯವಿದೆ.
• **ಈರಣ್ಣ ಕಡಾಡಿ** ರಾಜ್ಯಸಭಾ ಸದಸ್ಯ

ಉಪ ಕದನ, ಬೆಳಗಾವಿ ನಾಯಕರಿಗೆ ಹೈ ಸವಾಲು

ಬಾಗಲಕೋಟೆಗೆ ಸತೀಶ, ದಾವಣಗೆರೆ ಲಕ್ಷ್ಮಿ, 2 ಕ್ಷೇತ್ರಕ್ಕೂ ಸವದಿ ಸ್ಟಾರ್ ಪ್ರಚಾರಕ

• **ಕನ್ನಡಪ್ರಭ ವಾರ್ತೆ** ಬೆಳಗಾವಿ

■ ಬಾಗಲಕೋಟೆ ಮತ್ತು ದಾವಣಗೆರೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗಳು ಕೇವಲ ಕ್ಷೇತ್ರಗಳ ಗೆಲುವಿಗೆ ಸೀಮಿತವಾಗದೇ, ಬೆಳಗಾವಿ ಜಿಲ್ಲೆಯ ನಾಯಕರ ರಾಜಕೀಯ ಪ್ರಭಾವವನ್ನು ಪರೀಕ್ಷಿಸುವ ವೇದಿಕೆಯಾಗಿದೆ ಎಂಬುವುದರಲ್ಲಿ ಎರಡು ಮಾತಿಲ್ಲ, ಫಲಿತಾಂಶ ನಾಯಕರ ಸಾಮರ್ಥ್ಯಕ್ಕೂ ನಾಂದಿಯಾಗುತ್ತಾ?

ರಾಜ್ಯ ರಾಜಕಾರಣದಲ್ಲಿ ಉಪಚುನಾವಣೆಯ ಕಾವು ಹೆಚ್ಚುತ್ತಿದೆ. ಇದರ ನಡುವೆಯೇ ಕಾಂಗ್ರೆಸ್ ಹೈಕಮಾಂಡ್ ಈಗ ಉಪ ಕದನ ಏರ್ಪಟ್ಟಿರುವ ಬಾಗಲಕೋಟೆ ಮತ್ತು ದಾವಣಗೆರೆ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಗಡಿ ಜಿಲ್ಲೆಯ ಮೂವರುಪ್ರಭಾವಿನಾಯಕರಿಗೆಮಹತ್ವದಜವಾಬ್ದಾರಿಗಳನ್ನು ನೀಡಿದೆ. ಈ ಮೂಲಕ ಬೆಳಗಾವಿ ಜಿಲ್ಲೆಯ ನಾಯಕರಿಗೆ ಸವಾಲು ಕೂಡ ಎದುರಾಗಿದ್ದು, ಉಪ ಚುನಾವಣೆಯ ಕೇಂದ್ರಬಿಂದುವಾಗಿ ಹೊರಹೊಮ್ಮಿದ್ದಾರೆ.

ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗಾಗಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರಿಗೆ ಸಂಪೂರ್ಣ ಹೊಣೆಗಾರಿಕೆ ನೀಡಲಾಗಿದೆ. ಅಹಿಂದಸಮೀಕರಣದಲ್ಲಿಹಿಡಿತಹೊಂದಿರುವ ಸತೀಶ ಜಾರಕಿಹೊಳಿ, ಗ್ರಾಮ ಮಟ್ಟದ ಸಂಘಟನೆ ಬಲಪಡಿಸುವುದು, ಬೂತ್‌ವಾರು ಕಾರ್ಯತಂತ್ರ ರೂಪಿಸುವುದು ಮತ್ತು ಸ್ಥಳೀಯ ಅಸಮಾಧಾನ ನಿವಾರಣೆ ಮಾಡುವತ್ತ ಗಮನ ಹರಿಸಿದ್ದಾರೆ. ಅವರ ಶಾಂತ ಹಾಗೂ ಸಂಘಟಿತ ನಾಯಕತ್ವ ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಬಲ ತುಂಬುವ ನಿರೀಕ್ಷೆ ಇದೆ ಎನ್ನಲಾಗಿದೆ. ಜತೆಗೆ ಈ ಹಿಂದೆ ಶಿಗ್ಗಾಂವಿ ಉಪ ಚುನಾವಣೆಯಲ್ಲಿ ತಂತ್ರಗಾರಿಕೆ ರೂಪಿಸಿ ಬಿಜೆಪಿ ಬಲ ಕುಗ್ಗಿಸಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವಂತೆ ಮಾಡಿದ್ದರು ಸತೀಶ.

ಇನ್ನೊಂದೆಡೆ, ದಾವಣಗೆರೆ ವಿಧಾನಸಭಾ ಕ್ಷೇತ್ರದ ಜವಾಬ್ದಾರಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರಿಗೆ ಹೆಗಲಿಗೆ ಹೊರಿಸಲಾಗಿದೆ. ಮಹಿಳಾ ಮತದಾರರನ್ನು ಸೆಳೆಯುವ ಉದ್ದೇಶದಿಂದ ವಿಶೇಷ ಪ್ರಚಾರ ತಂತ್ರ ರೂಪಿಸಿರುವ ಹೆಬ್ಬಾಳಕರ ಅವರು, ಸ್ಥಳೀಯ ನಾಯಕರು ಮತ್ತು ಕಾರ್ಯಕರ್ತರೊಂದಿಗೆ ಸಮನ್ವಯ ಸಾಧಿಸಿ ಪ್ರಚಾರ ವೇಗಗೊಳಿಸಿದ್ದಾರೆ. ಯುವ ಮತದಾರರು ಮತ್ತು ನಗರ ಪ್ರದೇಶದ ಮತದಾರರ ಮೇಲೆ ಹೆಚ್ಚು ಒತ್ತು ನೀಡಲಾಗಿದೆ.

ಇದರ ನಡುವೆ ಇವೆರಡೂ ಕ್ಷೇತ್ರಗಳಲ್ಲಿ ಸ್ಟಾರ್ ಪ್ರಚಾರಕರಾಗಿ ಮಾಜಿ ಉಪಮುಖ್ಯಮಂತ್ರಿ, ಅಥಣಿ ಶಾಸಕ ಲಕ್ಷ್ಮಣ ಸವದಿ ಅವರನ್ನು ನಿಯೋಜಿಸಲಾಗಿದೆ. ಲಿಂಗಾಯತ ಸಮುದಾಯದ ಮೇಲೆ ಇರುವ ಅವರ ಪ್ರಭಾವವನ್ನು ಬಳಸಿಕೊಂಡು ಕಾಂಗ್ರೆಸ್ ಮತಬ್ಯಾಂಕ್ ವಿಸ್ತರಿಸಲು ಯತ್ನಿಸುತ್ತಿದೆ. ಸವದಿ ಅವರ ಪ್ರಚಾರ ಸಭೆಗಳು ಮತದಾರರ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ಪಕ್ಷದ ವಲಯಗಳು ಅಂದಾಜಿಸುತ್ತಿವೆ.

ಈ ಉಪಚುನಾವಣೆಯಲ್ಲಿ ಕಾಂಗ್ರೆಸ್ ಸ್ಪಷ್ಟವಾಗಿ ಎರಡು ಪ್ರಮುಖ ಸಮೀಕರಣಗಳ ಮೇಲೆ ಗಮನ ಹರಿಸಿದೆ. ಲಿಂಗಾಯತ ಸಮುದಾಯದ ಮತಗಳನ್ನು ಸೆಳೆಯಲು ಸವದಿ ಅವರನ್ನು ಮುಂದಿರಿಸಲಾಗಿದ್ದು, ಅಹಿಂದ ಸಮೀಕರಣವನ್ನು ಗಟ್ಟಿಗೊಳಿಸಲುಜಾರಕಿಹೊಳಿಮತ್ತುಹೆಬ್ಬಾಳ್ಕರ್‌ಕಾರ್ಯತಂತ್ರ ರೂಪಿಸಿದ್ದಾರೆ. ಇವೆರಡರ ಸಮನ್ವಯವೇ ಗೆಲುವಿನ ದಿಕ್ಕು ನಿರ್ಧರಿಸುವ ಪ್ರಮುಖ ಅಂಶವಾಗಲಿದೆ ಎನ್ನಲಾಗಿದೆ.

ಆದರೆ ಕಾಂಗ್ರೆಸ್‌ಗೆ ಬಾಗಲಕೋಟೆಗಿಂದ ದಾವಣಗೆರೆಯೇ ದೊಡ್ಡ ಸವಾಲಾಗಿದೆ. ಸ್ಥಳೀಯ ಮಟ್ಟದಲ್ಲಿ ಗುಂಪು ರಾಜಕೀಯ, ಅಭ್ಯರ್ಥಿ ಆಯ್ಕೆ ಕುರಿತ ಅಸಮಾಧಾನ ಮತ್ತು ವಿರೋಧ ಪಕ್ಷಗಳ ಆಕ್ರಮಣಕಾರಿ ಪ್ರಚಾರ ಈ ಕದನವನ್ನು ಇನ್ನಷ್ಟು ಕಠಿಣಗೊಳಿಸಿವೆ. ವಿಶೇಷವಾಗಿ ದಾವಣಗೆರೆಯಲ್ಲಿ ಅಲ್ಪಸಂಖ್ಯಾತರೊಬ್ಬರು ಕಾಂಗ್ರೆಸ್‌ನಿಂದ ಬಂಡಾಯವಾಗಿ ಸ್ಪರ್ಧೆ ಮಾಡಿರುವುದೇ ದೊಡ್ಡ ಸವಾಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಾಯಕರ ಸಂಘಟನಾ ಸಾಮರ್ಥ್ಯ ಮತ್ತು ಸಮನ್ವಯಕೌಶಲ್ಯ ಪ್ರಮುಖ ಅಂಶವಾಗಲಿದೆ. ಬಾಗಲಕೋಟೆ ಮತ್ತು ದಾವಣಗೆರೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗಳು ಕೇವಲ ಕ್ಷೇತ್ರಗಳ ಗೆಲುವಿಗೆ ಸೀಮಿತವಾಗದೇ, ಬೆಳಗಾವಿ ಜಿಲ್ಲೆಯ ನಾಯಕರ ರಾಜಕೀಯ ಪ್ರಭಾವವನ್ನು ಪರೀಕ್ಷಿಸುವ ವೇದಿಕೆಯಾಗಿದೆ ಎಂಬುವುದರಲ್ಲಿ ಎರಡು ಮಾತಿಲ್ಲ. ಈ ಕದನದಲ್ಲಿ ಕಾಂಗ್ರೆಸ್ ಸಾಧಿಸುವ ಫಲಿತಾಂಶ ಮುಂದಿನ ರಾಜಕೀಯ ತಂತ್ರಗಳಿಗೆ ದಿಕ್ಸೂಚಿಯಾಗಲಿದೆ.

ಬಾಲಕಿ ಮೇಲೆ ಅತ್ಯಾಚಾರ; 20 ವರ್ಷ ಜೈಲು

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಅಪ್ರಾಪ್ತೆ ಮೇಲೆ ಲೈಂಗಿಕ ಅತ್ಯಾಚಾರ ಎಸಗಿದ ಅಪರಾಧಿಗೆ ಬೆಳಗಾವಿಯ ಜಿಲ್ಲಾ ಪೋಕ್ಸೋ ನ್ಯಾಯಾಲಯ-1 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿದೆ.

ಮೂಡಲಗಿ ತಾಲೂಕಿನ ಹಳ್ಳೂರ ಗ್ರಾಮದ ಕಲ್ಲೇಶ ಲಕ್ಷ್ಮಣ ಕೌಜಲಗಿ (26) ಶಿಕ್ಷೆಗೆ ಗುರಿಯಾದವ. ಸಂತ್ರಸ್ತೆ ಅಪ್ರಾಪ್ತೆಯಾಗಿದ್ದು ಎಂಬುದು ತಿಳಿದಿದ್ದರೂ, 4.10.2025ರಂದು ಆರೋಪಿಯು ಆಕೆಯನ್ನು ಬೆದರಿಸಿ ತನ್ನೊಂದಿಗೆ ಕರೆದುಕೊಂಡು ಹೋಗಿದ್ದಾನೆ. ನಿನ್ನ ಫೋಟೋಗಳನ್ನು ಹರಿಬಿಡುತ್ತೇನೆ, ಕುಟುಂಬಕ್ಕೆ ಹಾನಿ ಮಾಡುತ್ತೇನೆ ಎಂದು ಬೆದರಿಕೆ ಹಾಕಿ, ಮೊದಲು ಹುಕ್ಕೇರಿ ಬಸ್ ನಿಲ್ದಾಣಕ್ಕೆ ಕರೆದುಕೊಂಡು ಹೋಗಿ ನಂತರ ಬೆಂಗಳೂರಿಗೆ ಕರೆದೊಯ್ದು ಪಿಜಿ ವಸತಿಯಲ್ಲಿ ಇರಿಸಿ ಅತ್ಯಾಚಾರ ವೆಸಗಿದ್ದ. ಈ ಕುರಿತು ಮೂಡಲಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದ ತನಿಖೆ ನಡೆಸಿದ ಪೊಲೀಸ್‌ಅಧಿಕಾರಿಗಳುನ್ಯಾಯಾಲಯಕ್ಕೆದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ವೇಳೆ 11 ಸಾಕ್ಷಿಗಳ ಹೇಳಿಕೆ, 71 ದಾಖಲೆಗಳು ಹಾಗೂ 3 ಮುದ್ದೆಮಾಲಗಳನ್ನು ಪರಿಗಣಿಸಿದ ನ್ಯಾಯಾಲಯ ಆರೋಪ ಸಾಬೀತಾಗಿದೆ ಎಂದು ತೀರ್ಪು ನೀಡಿದೆ. ನ್ಯಾಯಾಧೀಶೆ ಸಿ.ಎಂ.ಪುಷ್ಪಲತಾ ಅವರು, ಪೋಕ್ಸೋ ಕಾಯ್ದೆಯ ಕಲಂ 6ರಡಿ ಆರೋಪಿಗೆ 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹1 ಲಕ್ಷ ದಂಡ ವಿಧಿಸಿದ್ದಾರೆ. ದಂಡ ಪಾವತಿಸದಿದ್ದಲ್ಲಿ ಇನ್ನೂ 2 ವರ್ಷಗಳ ಶಿಕ್ಷೆ ಅನುಭವಿಸಬೇಕೆಂದು ಸೂಚಿಸಲಾಗಿದೆ.

ಇದೇ ವೇಳೆ, ಎಸ್‌ಸಿ, ಎಸ್‌ಟಿ (ಅತ್ಯಾಚಾರ ನಿರೋಧಕ) ಕಾಯ್ದೆಯಡಿ 10 ವರ್ಷಗಳ ಕಾರಾಗೃಹ ಶಿಕ್ಷೆ ಹಾಗೂ ₹50,000 ದಂಡ ವಿಧಿಸಲಾಗಿದ್ದು, ದಂಡ ಪಾವತಿಸದಿದ್ದರೆ 1 ವರ್ಷ ಹೆಚ್ಚುವರಿ ಶಿಕ್ಷೆ ವಿಧಿಸಲಾಗಿದೆ.

ನೊಂದ ಬಾಲಕಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಮೂಲಕ ₹4 ಲಕ್ಷ ಪರಿಹಾರ ನೀಡುವಂತೆ ನ್ಯಾಯಾಲಯ ಆದೇಶಿಸಿದೆ. ಈ ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ 5 ವರ್ಷಗಳವರೆಗೆ ಠೇವಣಿಯಾಗಿ ಇಡಲು ಸೂಚಿಸಲಾಗಿದೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಎಲ್.ವಿ. ಪಾಟೀಲ ಅವರು ವಾದ ಮಂಡಿಸಿದ್ದರು.

ಎಂ.ವ್ಹಿ.ಸಿ. ನಂ. 397/2025
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಹೆಚ್ಚುವರಿ ವಾಹನ ಅಪಘಾತ ಪರಿಹಾರ ಟ್ರಿಬುನಲ್ ರಾಮದುರ್ಗ

1) ಶ್ರೀಮತಿ ರೇಣವ್ವ ಕೋಂ. ಹನಮಂತ ಮಲ್ಲಾಡ ಹಾಗೂ ಇತರರು ...ಅರ್ಜಿದಾರರು
ವಿರುದ್ಧ
1) ಈರಣ್ಣ ಬಸಪ್ಪ ಹಾಲೋಳ್ಳಿ ಮೈತ, ವಾರಸುದಾರರು ಹಾಗೂ ಇತರರು ...ಎದುರುಗಾರರು

ಗೆ,
ಎದುರುಗಾರ ನಂ.3 ಬಸವರಾಜ ತಂದೆ: ವೀರಣ್ಣ ಸಾಕೀನ: ಕಂಪಾಳಯ್ಯ ಮನೆ ರಸ್ತೆ, ಮದಕರಿ ನಗರದ ಹಿಂದುಗಡೆ, ಚಳ್ಳಕೇರಿ, ತಾ: ಚಳ್ಳಕೇರಿ, ಜಿ: ಚಿತ್ರದುರ್ಗ.

ಜಾಹೀರ ನೋಟಿಸ್

ಮೇಲ್ಕಾಣಿಸಿದ ಪ್ರಕರಣದಲ್ಲಿ ಅರ್ಜಿದಾರ ನಂ.1 ಇವಳ ಪತಿ ಹಾಗೂ ಅರ್ಜಿದಾರ ನಂ.2 ಮತ್ತು 3 ಇವರ ತಂದೆಯು ಅಪಘಾತದಲ್ಲಿ ಮರಣ ಹೊಂದಿದ್ದ ಬಗ್ಗೆ ಪರಿಹಾರ ಕೋರಿ ಎದುರುಗಾರರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದು, ಈ ದಾವೆಯಲ್ಲಿ ನೀವು ಎದುರುಗಾರ ನಂ.3 ಇದ್ದು, ಮಾನ್ಯ ನ್ಯಾಯಾಲಯದಿಂದ ಪ್ರಕರಣದ ಸಮನ್ಸ್ ತಮ್ಮ ವಿಳಾಸಕ್ಕೆ ಕಳಿಸಿದಾಗ ತಾವುಗಳು ಸದರಿ ಸಮನ್ಸ್ ಸ್ವೀಕರಿಸುವುದನ್ನು ತಪ್ಪಿಸುತ್ತಾ ಇರುವುದು ತಿಳಿದು ಬಂದಿರುತ್ತದೆ.

ಕಾರಣ ಎದುರುಗಾರ ನಂ.3 ನೀವು ಮಾನ್ಯ ನ್ಯಾಯಾಲಯಕ್ಕೆ ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲಿ ದಿನಾಂಕ: 03/06/2026 ರಂದು ಮುಂಜಾನೆ 10:30 ಘಂಟೆಗೆ ಹಾಜರಾಗಬೇಕು.

ಒಂದು ವೇಳೆ ತಾವು ಸದರಿ ದಿನದಂದು ಸಕಾಲದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಹಾಜರಾಗದಿದ್ದರೆ ತಮ್ಮದು ಯಾವುದೇ ಹೇಳಿಕೆ ಇಲ್ಲವೆಂದು ಮಾನ್ಯ ನ್ಯಾಯಾಲಯವು ಏಕಪಕ್ಷೀಯವಾಗಿ ಈ ಪ್ರಕರಣವನ್ನು ನಿರ್ಣಯಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಈ ನ್ಯಾಯಾಲಯದ ಆದೇಶ ಮತ್ತು ಮೊಹರಿನೊಂದಿಗೆ ಈ ನೋಟಿಸ್‌ನ್ನು ಹೊರಡಿಸಲಾಗಿದೆ.
ಸ್ಥಳ: ರಾಮದುರ್ಗ, ದಿನಾಂಕ: 04/03/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– (ಎಂ. ಆರ್. ಪರೀಟ), ಹಿರಿಯ ಶಿರಸ್ತೆದಾರರು
ಹಿರಿಯ ದಿವಾಣಿ ನ್ಯಾಯಾಲಯ ರಾಮದುರ್ಗ
ಸಹಿ/– (ಆರ್. ಬಿ. ಜಾಲಿಕಟ್ಟಿ) (Seal)
ಅರ್ಜಿದಾರರ ಪರ ವಕೀಲರು

ಮೆ॥ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ರಾಮದುರ್ಗ ಇವರ ನ್ಯಾಯಾಲಯದಲ್ಲಿ ರಾಮದುರ್ಗ
ಅಸಲ ದಾವಾ ನಂ. 155/2025

1) ಶ್ರೀ ಅನೀಲಬಾಬು ನಾಯಕ ...ವಾದಿ
ವಿರುದ್ಧ
1) ಶ್ರೀ ಅಜೀತ ತಂ: ಗೌಡಪ್ಪ ನಾಯಕ ...ಪ್ರತಿವಾದಿ

ಪ್ರತಿವಾದಿ :
1) ಶ್ರೀ ಅಜೀತ ತಂ: ಗೌಡಪ್ಪ ನಾಯಕ
ಸಾ: ದೇವಗಿರಿ, ಹಾವೇರಿ
2) ಶ್ರೀಮತಿ ಪ್ರತಿಭಾ ಗಂ: ಸಂತೋಷಕುಮಾರ ಕೃಷ್ಣಗೌಡರ
ಸಾ: ಹಿಂಡಲಗಾ ರೋಡ, ಗಣೇಶಪುರ, ಬೆಳಗಾವಿ
11) ಶ್ರೀ ಶ್ರೀನಿವಾಸ ತಂ: ವೆಂಕಟೇಶ ನಾಯಕ
ಸಾ: ಹೊಸಕೋಟಿ, ತಾ: ರಾಮದುರ್ಗ, ಜಿ: ಬೆಳಗಾವಿ

ಸಮನ್ಸ್ ಆದೇಶ 5 ನಿಯಮ 20(ಎ) ಸಿ.ಪಿ.ಸಿ. ಅಡಿಯಲ್ಲಿ

ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ಧ ಘೋಷಣೆಗಾಗಿ, ಸ್ವಾಧೀನತೆಗಾಗಿ ಹಾಗೂ ಮನಾಯಿಗಾಗಿ ದಾವೆ ಮಾಡಿದ್ದು ಸದರಿ ಪ್ರಕರಣದಲ್ಲಿ ನೀವು ಪ್ರತಿವಾದಿ ನಂ. 1, 2 ಮತ್ತು 11 ಇದ್ದು, ನೀವು ಉದ್ದೇಶ ಪೂರ್ವಕವಾಗಿ ನ್ಯಾಯಾಲಯದ ಸಮನ್ಸ್ ತೆಗೆದುಕೊಳ್ಳುವ ಸಂಬಂಧ ತಪ್ಪಿಸಿಕೊಳ್ಳುತ್ತಿರುವಿರಿ. ಕಾರಣ ಸದರಿ ಸಮನ್ಸ್ ಈ ಪತ್ರಿಕಾ ಪ್ರಕಟಣೆಯ ಜಾಹೀರ ನೋಟಿಸಿನ ಮುಖಾಂತರ ಈ ಪ್ರಕರಣವನ್ನು ತಮ್ಮ ಗಮನಕ್ಕೆ ತಂದಿರುತ್ತೇವೆ. ಈ ಪ್ರಕರಣದಲ್ಲಿ ತಮ್ಮದು ಏನಾದರೂ ಹಿತಾಸಕ್ತಿಗಳು ವ ತಕರಾರು ಇದ್ದರೇ, ಸದರಿ ಪ್ರಕರಣದಲ್ಲಿ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗಿ ನಿಮ್ಮ ಹೇಳಿಕೆಯನ್ನು ಕೊಡಲು ದಿನಾಂಕ: 12/06/2026 ರಂದು ಸರಿಯಾಗಿ ಮುಂಜಾನೆ 10:30 ಘಂಟೆಗೆ ಈ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಆಕ್ಷೇಪಣೆ ಸಲ್ಲಿಸಬೇಕು, ಇಲ್ಲವಾದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ನಿರ್ಣಯಿಸಲಾಗುವದು.

ನ್ಯಾಯಾಲಯದ ಆಡಳಿತ ಮತ್ತು ಮೊಹರಿನೊಂದಿಗೆ ಈ ದಿನ 26/03/2026 ರಂದು ನೀಡಲಾಗಿದೆ.
ಸ್ಥಳ: ರಾಮದುರ್ಗ, ದಿನಾಂಕ: 26/03/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೆದಾರರು
ಮೆ॥ ಪ್ರಧಾನ ದಿವಾಣಿ ನ್ಯಾಯಾಲಯ ರಾಮದುರ್ಗ
ಸಹಿ/– (ಬಿ. ಎಸ್. ತೇಲಿ) (Seal)
ವಾದಿ ಪರ ವಕೀಲರು

MANAPPURAM FINANCE LTD.

CIN : L65910KL1992PLC006623
Registered Office : W - 4/ 638A, Manappuram House,
P.O. Valapad, Thrissur - 680 567, Kerala, India

ಹರಾಜು ಪ್ರಕಟಣೆ

ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟಿರುವ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು 16/04/2026 ರಂದು ಬೆಳಿಗ್ಗೆ 10.00 ಗಂಟೆಯಿಂದ ಈ ಕೆಳಗಿನ ಶಾಖೆಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಈ ಮೂಲಕ ವಿಶೇಷವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಸುಸ್ತಿದಾರ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡಲಾಗುತ್ತದೆ. ಹರಾಜಾಗದ ವಸ್ತುಗಳನ್ನು ಯಾವುದೇ ಸೂಚನೆ ಇಲ್ಲದೆ ಬೇರೆ ಯಾವುದೇ ದಿನಗಳಲ್ಲಿ ಹರಾಜು ಮಾಡಲಾಗುವುದು. ಹರಾಜಿನ ದಿನಾಂಕದಂದು ಚಿನ್ನದ ಮಾರುಕಟ್ಟೆ ಬೆಲೆ ಅಥವಾ ಸರಾಸರಿ 30 ದಿನಗಳ IBJA ದರದ 85%, ಯಾವುದು ಹೆಚ್ಚೋ ಅದರ ಆಧಾರದ ಮೇಲೆ ಮೀಸಲು ಬೆಲೆಯನ್ನು ನಿಗದಿಪಡಿಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಯಾವುದಾದರೂ ಇದ್ದರೆ) ಹರಾಜು ಕೇಂದ್ರದಲ್ಲಿ ಮತ್ತು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗುತ್ತದೆ. ಕೆಳಗೆ ನೀಡಲಾದ ವಿವರಗಳು ಶಾಖೆಯ ಹೆಸರು, ಸಾಲದ ಸಂಖ್ಯೆ, ಗ್ರಾಹಕರ ಹೆಸರು, ಒಟ್ಟು ಬಾಕಿ ಮೊತ್ತ ('ನಲ್ಲಿ') ಐಟಂ ಹೆಸರಿನ ಕ್ರಮದಲ್ಲಿದೆ

ಅಡವುಗಳ ಪಟ್ಟಿ :
ಬಾಗಲಕೋಟೆ, ಬಾಗಲ್‌ಕೋಟೆ ನಾಗಪ್ಪ ಕಟ್ಟಿ ರಸ್ತೆ, 0123750700042420, ಶಾವಂತರವ್ವ ಪವಾರ್, 11970/–, ಸ್ಟಡ್ 1, ಬಿಜಾಪುರ, ಕೋರಿ ಸರ್ಕಲ್ ಬಿಜಾಪುರ, 0134230700051014, ರಚಯ್ಯ ಹಿರೆಮಠ್, 76626/–, ಫಿಂಗರ್ ರಿಂಗ್ಸ್ 1,ಉ–ಡ್ರಾಪ್ಸ್ & ಸ್ಟಡ್ 1,ಡ್ರಾಪ್ಸ್ & ಸ್ಟಡ್ 1, ಬಾಗಲಕೋಟೆ, ವಿದ್ಯಾಗಿರಿ ಬಾಗಲ್‌ಕೋಟೆ, 0116200730039853, ಪ್ರಮೋದ್ ಲಗತಗೇರಿ, 463620/–, ಬ್ಯಾಂಗಲ್ 1,

ಮೇಲಿನ ಹರಾಜಿನಲ್ಲಿ ಭಾಗವಹಿಸಲು ಬಯಸುವ ವ್ಯಕ್ತಿಗಳು ಈ ಮುಂದೆ ತಿಳಿಸಿರುವುದನ್ನು ಅನುಸರಿಸತಕ್ಕದ್ದು:- ಆಸಕ್ತಿಯುಳ್ಳ ಸವಾಲು ಕೂಗುವವರು (ಬಿಡ್ಡರ್ ಗಳು) ಎನ್‌ಇಎಫ್ ಟಿ/ಆರ್ ಟಿಜಿಎಸ್ ವಿಧಾನದ ಮೂಲಕ ರೂ. 10,000/ ಅನ್ನು ಇಎಂಡಿ (ವಿಫಲಗೊಂಡ ಸವಾಲು ಕೂಗುವವರಿಗೆ ಮರುಪಾವತಿಯಾಗುವಂಥದ್ದು) ಆಗಿ ಹರಾಜಿನ ದಿನದಂದೇ ಸಲ್ಲಿಸಬೇಕು. ಸವಾಲು ಕೂಗುವವರು ಮಾನ್ಯವಾದ ಐಡಿ ಕಾರ್ಡ್/ಪ್ಯಾನ್ ಕಾರ್ಡ್ ಇಟ್ಟುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 9072607147 ಅನ್ನು ಸಂಪರ್ಕಿಸಿ.

ಅಧಿಕೃತ ಅಧಿಕಾರಿ.
ಮಣಪ್ಪುರಂ ಫೈನಾನ್ಸ್ ಅ. ಪರವಾಗಿ

ಅಸಲ ದಾವಾ ನಂ. 127/2021,
ಮೆ॥ ಹಿರಿಯ ದಿವಾಣಿ ನ್ಯಾಯಾಧೀಶರು ಹುಕ್ಕೇರಿ ಇವರ ನ್ಯಾಯಾಲಯದಲ್ಲಿ ಸ್ಥಳ: ಹುಕ್ಕೇರಿ

1) ಶ್ರೀ ಉಮೇಶ ಅವಣ್ಣಾ ಅಮಾತೆ
2) ಕು. ಸಮಿತಾ ಅವಣ್ಣಾ ಅಮಾತೆ ...ವಾದಿಯರು
ವಿರುದ್ಧ
1] ಶಿವಾಜಿ ಅಮಾತಿ ಹಾಗೂ ಇತರರು ...ಪ್ರತಿವಾದಿಯರು

ಗೆ,
5ಎ] ಶ್ರೀಮತಿ ಲಗಮವ್ವಾ ಹಣವಂತ ಅಮಾತೆ, ವಯಾ: ಮೇಜರ ವರ್ಷ, ಉದ್ಯೋಗ: ಮನೆಗೆಲಸ. ಸಾ॥ ಬಸ್ಸಾಪೂರ, ತಾ॥ ಹುಕ್ಕೇರಿ, ಜಿಲ್ಲಾ: ಬೆಳಗಾವಿ,
5ಬಿ] ಶ್ರೀ ಮಾರುತಿ ಹಣವಂತ ಅಮಾತೆ, ವಯಾ: ಮೇಜರ ವರ್ಷ, ಉದ್ಯೋಗ: ಒಕ್ಕಲುತನ. ಸಾ॥ ಬಸ್ಸಾಪೂರ, ತಾ॥ ಹುಕ್ಕೇರಿ, ಜಿಲ್ಲಾ ಬೆಳಗಾವಿ,
5ಸಿ] ಶ್ರೀ ಲಗಮಣ್ಣಾ ಹಣವಂತ ಅಮಾತೆ, ವಯಾ:ಮೇಜರ ವರ್ಷ, ಉದ್ಯೋಗ: ಒಕ್ಕಲುತನ. ಸಾ॥ ಬಸ್ಸಾಪೂರ, ತಾ॥ ಹುಕ್ಕೇರಿ, ಜಿಲ್ಲಾ: ಬೆಳಗಾವಿ,
5ಡಿ] ಶ್ರೀ ಸತ್ಯಪ್ಪಾ ಹಣವಂತ ಅಮಾತೆ, ವಯಾ: ಮೇಜರ ವರ್ಷ, ಉದ್ಯೋಗ: ಒಕ್ಕಲುತನ. ಸಾ॥ ಬಸ್ಸಾಪೂರ, ತಾ॥ ಹುಕ್ಕೇರಿ, ಜಿಲ್ಲಾ ಬೆಳಗಾವಿ,

:ಸಿ.ಪಿ.ಸಿ. ಕ್ರಮಾದೇಶ 5 ರೂಲ್ 20(1/ಎ) ರ ಪ್ರಕಾರ ಜಾಹಿರ ಪತ್ರಿಕಾ ಪ್ರಕಟಣೆ ನೋಟಿಸು:

ಸದರಿ ದಾವೆಯಲ್ಲಿ ವಾದಿಯು ಸದರಿ ಪ್ರತಿವಾದಿಯರ ವಿರುದ್ಧ ಪಾಲು ಕೋರಿ ದಾವೆ ದಾಖಲ ಮಾಡಿದ್ದು ಇವರಿಗೆ ನ್ಯಾಯಾಲಯದ ಸಮನ್ಸುಗಳು ಸಾಧಾರಣ ರೀತಿಯಲ್ಲಿ ಜಾರಿ ಯಾಗದೇ ಇದ್ದರಿಂದ ಸದರಿ ಪ್ರಕಟಣೆಯನ್ನು ಪ್ರಕಟಿಸಿದ್ದು, ನಿಮ್ಮದು ಏನಾದರು ಪ್ರತಿವಾದ ಇದ್ದಲ್ಲಿ, ದಿನಾಂಕ 21/04/2026 ರಂದು ಮುಂಜಾನೆ 11:00 ಗಂಟೆಗೆ ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಹುಕ್ಕೇರಿ ಇವರ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ತಮ್ಮ ವಕೀಲರ ಮುಖಾಂತರ ಹಾಜರಾಗಬೇಕು, ಒಂದು ವೇಳೆ ತಪ್ಪಿದ್ದಲ್ಲಿ, ಮಾನ್ಯ ನ್ಯಾಯಾಲಯವು ಈ ದಾವೆಯಲ್ಲಿ ಯಾವುದೇ ತಕರಾರುಗಳು ಇಲ್ಲವೆಂದು ಪರಿಗಣಿಸಿ ಮುಂದಿನ ಆದೇಶ ಮಾಡಲಾಗುವದು ಮತ್ತು ಏಕತರ್ಫಿ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಜಾಹಿರ ನೋಟಿಸ್.

ಈ ದಿನ ದಿ:25/03/2026 ರಂದು ಕೋರ್ಟಿನ ಮೋಹರು ನಮ್ಮ ಸಹಿಯೊಂದಿಗೆ ಕೊಡಲ್ಪಟ್ಟಿತ್ತು.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಹಿರಿಯ ಶಿರಸ್ತೇದಾರರು(ಆಡಳಿತ)
ಹಿರಿಯ ದಿವಾಣಿ ನ್ಯಾಯಾಧೀಶರು ಹುಕ್ಕೇರಿ. ಇವರ ನ್ಯಾಯಾಲಯ
ಸಹಿ/–(ಎ.ವ್ಹಿ.ಕಿತ್ತೂರ), ಬೆಂಚ್ ಕ್ಲರ್ಕ್
(ಸಹಿ/–ಎಸ್.ಬಿ.ಗುಡಸಿ)
ವಾದಿಯರ ಪರ ವಕೀಲರು

ಅಸಲು ದಾವಾ ನಂ. 30/2024
ಮೆ॥ ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಸವದತ್ತಿ ಇವರ ನ್ಯಾಯಾಲಯದಲ್ಲಿ ಸವದತ್ತಿ

ಆಸಿಫ್ ಮೊಹಮ್ಮದಹನೀಫ್ ಮುಜಾವರ ...ವಾದಿ
ವಿರುದ್ಧ
ರಾಯಪ್ಪ ಬಾಳಪ್ಪ ಹರಿಜನ್ ಹಾಗೂ ಮತ್ತಿತರರು ...ಪ್ರತಿವಾದಿಯರು

ನೋಟಿಸು ಅಂಡರ ಆರ್ಡರ–5, ರೂಲ್–20 ಸಿ.ಪಿ.ಸಿ ಕೆಳಗೆ

ಪ್ರತಿವಾದಿ ನಂ. 7 ಇವರಿಗೆ:
7) ಅಡಿವೆಪ್ಪ ಲಕ್ಕಪ್ಪ ಗುಂಡಿನವರ ಉರ್ಫ ಗುಂಡಿ ವಯಸ್ಸು: 34 ವರ್ಷ, ಉದ್ಯೋಗ: ಒಕ್ಕಲುತನ ಸಾ: ವಜ್ಜೆಗಲ್ಲಿ, ವಡಗಾಂವ್, ಬೆಳಗಾವಿ ಸಾ: ಬೆನಚಿನಮರ್ಡಿ, ತಾ: ಗೋಕಾಕ

ಜಾಹೀರು ಪ್ರಕಟಣೆ

ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ದಾವಾ ಆಸ್ತಿಯ ಕುರಿತು ಮಾಲೀಕತ್ವದ ಘೋಷಣೆ ಮತ್ತು ಖಾಯಂ ಮನಾಯಿಸ ಸಲುವಾಗಿ ಮಾಡಿರುತ್ತಾನೆ. ಈ ದಾವೆಯಲ್ಲಿ ಪ್ರತಿವಾದಿ ನಂ.7 ಆದ ನಿಮಗೆ ದಾವಾ ಸಮನ್ಸ ಸದರಿ ವಿಳಾಸಕ್ಕೆ ಕಳಿಸಿದರೆ ಮೊದಲು ಅಲ್ಲಿದ್ದು ನಂತರ ಸ್ಥಳ ಬದಲಾಯಿಸಿರುವುದಾಗಿ ತಿಳಿದುಬಂದಿರುತ್ತದೆ. ಆದ್ದರಿಂದ ಈ ಜಾಹೀರು ಪ್ರಕಟಣೆಯ ಮುಖಾಂತರ ಮೇಲ್ಕಾಣಿಸಿದ ದಾವಾದ ಸಮನ್ಸನ್ನು ನಿಮಗೆ ಕಳಿಸುವ ಪ್ರಸಂಗ ಬಂದಿರುತ್ತದೆ. ಈ ಕೇಸಿನ ಮುಂದಿನ ತಾರೀಖು ದಿನಾಂಕ: 01/06/2026 ರಂದು ಇದ್ದು ಆ ದಿವಸ ನೀವುಗಳಾಗಲಿ ಅಥವಾ ನಿಮ್ಮ ಪರವಾಗಿ ವಕೀಲರ ಮುಖಾಂತರವಾಗಲಿ ಮುಂಜಾನೆ 10:30 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಿದ್ದು ಕೇಸಿನ ಕಲಾಪಗಳಲ್ಲಿ ಭಾಗವಹಿಸಬಹುದು. ಇಲ್ಲವಾದಲ್ಲಿ ಕಾನೂನು ರಿತ್ಯ ಈ ಕೇಸನ್ನು ಮುಂದುವರಿಸಿಕೊಂಡು ಹೋಗಲಾಗುವುದು.

ಈ ಹೊತ್ತು ದಿನಾಂಕ: 25/03/2026 ರಂದು ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.
ಸವದತ್ತಿ, ದಿನಾಂಕ: 25/03/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಸಿಎಂಓ
ಪ್ರಧಾನ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ MACT ನ್ಯಾಯಾಲಯ ಸವದತ್ತಿ
ಸಹಿ/– (ಎಸ್. ಎಂ. ಮೇದಾರ), ಶಿರಸ್ತೆದಾರರು
ಸೀನಿಯರ್ ಸಿವ್ಹಿಲ್ ಜಡ್ಜ್ ಸವದತ್ತಿ
ಸಹಿ/– ದ್ವಿತೀಯ ದರ್ಜೆ ಗುಮಾಸ್ತರು
ಸೀನಿಯರ್ ಸಿವ್ಹಿಲ್ ಜಡ್ಜ್ ಸವದತ್ತಿ
ಸಹಿ/– (ಎಲ್. ಎಂ. ಶರೆಗಾರ) (Seal)
ವಾದಿಯರ ಪರ ವಕೀಲರು

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

IDFC FIRST Bank

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)
CIN : L65110TN2014PLC097792
ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್ಸ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031.
ದೂ: +91 44 4564 4000/ ಫ್ಯಾಕ್ಸ್ : +91 44 4564 4022

2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಕಲಂ 13(2)ರಡಿ ಸೂಚನೆ

ಕೆಳಕಂಡ ಸಾಲಗಾರರು ಮತ್ತು ಸಹ-ಸಾಲಗಾರರು ಕೆಳಕಂಡಂತೆ ವಿವರಿಸಲಾದ ಭದ್ರತಾ ಸಾಲಗಳನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ನಿಂದ ಪಡೆದಿರುತ್ತಾರೆ. ಹೀಗೇ ಪಡೆದ ಸಾಲಗಳಿಗೆ ಸಾಲಗಾರರು ಸಹ ಸಾಲಗಾರರು ಸಂಬಂಧಿಸಿದ ಆಸ್ತಿಗಳನ್ನು ಅಡಮಾನ ಮಾಡಿ ಭದ್ರತೆ ಒದಗಿಸಿರುತ್ತಾರೆ. ಇವರುಗಳು ಸಂಬಂಧಪಟ್ಟ ಸಾಲಗಳ ಕರಾರುಪತ್ರದ ಷರತ್ತು ಮತ್ತು ನಿಬಂಧನೆಗಳಂತೆ ನಡೆದುಕೊಳ್ಳಲು ವಿಫಲರಾಗಿರುತ್ತಾರೆ. ಆದುದರಿಂದ ಅವರ ಸಾಲದ ಖಾತೆಗಳು ಅನಿಯಮಿತವಾಗಿದ್ದರಿಂದ ಆರ್‌ಬಿಐ ಮಾರ್ಗದರ್ಶನಗಳಂತೆ ಎನ್‌ಪಿಎ ಎಂಬುದಾಗಿ ವರ್ಗೀಕರಿಸಲಾಗಿದೆ. ನಿರ್ದಿಷ್ಟವಾಗಿ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವಂತೆ ನಿಗದಿತವಾದ ನೋಟೀಸ್‌ಗಳನ್ನು ಜಾರಿಮಾಡಿ ಬಾಕಿ ಸಾಲ, ಸಂಬಂಧಪಟ್ಟ ದಿನಾಂಕದಿಂದ ಕರಾರಿನ ತದನಂತರದ ಬಡ್ಡಿಯು ಅನ್ವಯಿಸಲಿದೆ ಮತ್ತು ಇದನ್ನು ಒಪ್ಪಂದದ ದರದಂತೆ ಅವರ ಸಂಬಂಧಿಸಿದ ದಿನಾಂಕಗಳಿಂದ ವಿಧಿಸಲಾಗುವುದು. ಬಾಕಿ ಮೊತ್ತವನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಪಾವತಿ ಮಾಡಲು ಸೂಚಿಸಲಾಗಿರುತ್ತದೆ.

ಕ್ರ. ಸಂ.	ಸಾಲ ಖಾತೆ ಸಂ.	ಸಾಲದ ವಿಧ	ಸಾಲಗಾರರ ಮತ್ತು ಸಹ-ಸಾಲಗಾರರ ಹೆಸರು	ಸೆಕ್ಷನ್ 13(2)ರಡಿ ನೋಟೀಸ್ ದಿನಾಂಕ	ಸೆಕ್ಷನ್ 13(2)ರ ನೋಟೀಸ್ ನಂತೆ ಬಾಕಿ ಮೊತ್ತ
1	40078401	ಆಸ್ತಿ ಮೇಲಿನ ಸಾಲ	1. ಉಮೇಶ್ ಬಸಪ್ಪ ಬಡಿಗೇರ್ 2. ಪೂರ್ಣಿಮ ಉಮೇಶ್ ಬಡಿಗೇರ್	07.03.2026	ಐಎನ್‌ಆರ್ 2,16,418.59/-

ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಮನೆ ಆಸ್ತಿಯ ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 3.42 ಮೀಟರ್, ಉತ್ತರದಿಂದ ದಕ್ಷಿಣಕ್ಕೆ : 10.06 ಮೀಟರ್, ಒಟ್ಟು: 34.41 ಚದರ ಮೀಟರ್, ವಿಪಿಸಿ ಸಂ. 67 ರಲ್ಲಿ ರೂಪುಗೊಂಡಿದ್ದು, ಹನುಮಸಾಗರ ಗ್ರಾಮ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲೆ, ಕರ್ನಾಟಕ- 591114 ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ರುದ್ರಪ್ಪ ಸೋಮಪ್ಪ ಬಡಿಗೇರ್ ರವರ ಆಸ್ತಿ, ಪಶ್ಚಿಮಕ್ಕೆ: ಶ್ರೀ ಶಿವಾನಂದ ವೀರಪ್ಪ ಪತ್ತಾರ್ ರವರ ಮನೆಯ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಮಾರುತಿ ಬಸಪ್ಪ ಹಗೆದ್ ರವರ ಮನೆಯ ಆಸ್ತಿ.

ಮೇಲಿನ ಪಟ್ಟಿಯಲ್ಲಿ ತೋರಿಸಿದಂತೆ ಬಾಕಿ ಸಾಲದ ಮೊಬಲಗು ಹಾಗೂ ಸಂಬಂಧಪಟ್ಟ ದಿನಾಂಕದಿಂದ ಕರಾರಿನ ದರದಂತೆ ಬಡ್ಡಿ , ಕಾಸ್ಟ್ , ಛಾರ್ಜ್ ಗಳು ಇತ್ಯಾದಿ ಸೇರಿದ ಮೊತ್ತವು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)ಗೆ ಬಾಕಿಯಾಗಿರುತ್ತೀರಿ. ಈ ನೋಟೀಸು ಪ್ರಕಟಣೆಗೊಂಡ 60 ದಿನಗಳ ಒಳಗಾಗಿ ಪಾವತಿ ಮಾಡುವುದು ವಿಫಲರಾದಲ್ಲಿ ಕೆಳಸಹಿದಾರರು, ಅನಿವಾರ್ಯವಾಗಿ ಸರ್ಫೇಸಿ ಕಾಯಿದೆಯ 13(4) ಮತ್ತು 14ರಂತೆ ಕಾನೂನಿನ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿ ಮೇಲೆ ತಿಳಿಸಿದ ಆಸ್ತಿಗಳನ್ನು ಬಾಕಿ ಸಾಲ ವಸೂಲಾತಿಗಾಗಿ ಸ್ವಾಧೀನಪಡಿಸಿಕೊಂಡು ಮಾರಾಟ ಮಾಡುತ್ತಾರೆ. ಆದುದರಿಂದ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಸಾಲಕ್ಕಾಗಿ ಅಡಮಾನ ಮಾಡಿರುವ ಆಸ್ತಿಗಳನ್ನು ಮಾರಾಟ/ಲೀಸ್ ಅಥವಾ ಇತರೇ ರೀತಿಯಲ್ಲಿ ಕಲಂ 13(13) ರಂತೆ, ವರ್ಗಾವಣೆ ಮಾಡದಂತೆ ನಿಮ್ಮನ್ನು ಪ್ರತಿಬಂಧಿಸಲಾಗಿದೆ.

ಸಹಿ/- ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)
ದಿನಾಂಕ: 27.03.2026
ಸ್ಥಳ: ಬೆಳಗಾವಿ, ಕರ್ನಾಟಕ

ಸುಂದರಂ ಹೋಂ ಫೈನಾನ್ಸ್ ಲಿಮಿಟೆಡ್

SUNDARAM HOME — Sundaram Finance Group —

ನೋಂದಾಯಿತ ಕಛೇರಿ: ನಂ.21, ಪಟ್ಟುಲೋಸ್ ರಸ್ತೆ, ಚೆನ್ನೈ-600 002.
ಕಾರ್ಪೊರೇಟ್ ಆಫೀಸ್: ಸುಂದರಂ ಟವರ್ಸ್, ಸಂ.46, ವೈಟ್ಸ್ ರಸ್ತೆ, ಚೆನ್ನೈ-600 014.
ಶಾಖಾ ಕಛೇರಿ: ಶಾಪ್ ಸಂ.9, 3ನೇ ಮಹಡಿ, ಸಿಟಿಎಸ್ ಸಂ. 10632, ಮುಜಾವರ್ ಆರ್ಕೆಡ್, ನೆಹರು ನಗರ್, ಪಿ ಬಿ ರಸ್ತೆ, ಬೆಳಗಾವಿ - 590 010. 0831- 2471019

ಡಿಮಾಂಡ್ ನೋಟೀಸ್

(2002ರ (ಸರ್ಫೇಸಿ ಕಾಯಿದೆ) ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಕಲಂ 13(2)ರಡಿ)

ಸಂಬಂಧಪಟ್ಟ ಪ್ರತಿಯೊಬ್ಬರಿಗೆ ಈ ಮೂಲಕ ತಿಳಿಸುವುದೇನೆಂದರೆ ಕಂಪನಿಯು ಸೆಕ್ಯೂರಿಟೈಸೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಕಾಯ್ದೆ, 2002ರ ಮೇರೆಗೆ ನಿಮ್ಮಗಳಲ್ಲಿ ಪ್ರತಿಯೊಬ್ಬರ ಮೇಲೂ ಕ್ರಮ ಕೈಗೊಳ್ಳಲು ಆರಂಭಿಸಿ ಸರ್ಫೇಸಿ ಕಾಯ್ದೆಯ ಸೆಕ್ಷನ್ 13(2)ರಡಿ ನಿಮಗೆ ಪ್ರತ್ಯೇಕವಾಗಿ ರಿಜಿಸ್ಟರ್ಡ್ ಅಂಚೆ ಮೂಲಕ ಕಳುಹಿಸಿದ ನೋಟೀಸುಗಳು ಸ್ವೀಕೃತವಾಗದೇ ವಾಪಸ್ಸು ಬಂದಿವೆ, ಆದ್ದರಿಂದ ಈ ಪ್ರಕಟಣೆಯ ದಿನಾಂಕದಿಂದ 60 ದಿನಗಳೊಳಗಾಗಿ ಬಾಕಿ ಹಣವನ್ನು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಸಂದಾಯ ಮಾಡಲು ಈ ಮೂಲಕ ನಿಮಗೆ ಕರೆ ನೀಡಲಾಗಿದೆ, ತಪ್ಪಿದಲ್ಲಿ ಕಂಪನಿಯು ಕಾಯ್ದೆ ಕಲಂ 13(4)ರ ಅಡಿಯಲ್ಲಿ ಬಡ್ಡಿ ಮತ್ತು ವೆಚ್ಚಗಳೊಂದಿಗೆ ಬಾಕಿಯನ್ನು ವಸೂಲಿ ಮಾಡಿಕೊಳ್ಳಲು ಕ್ರಮಗಳು ಕೆಳಗೆ ಸೂಚಿಸಿರುವ ಆಸ್ತಿಗಳ ವಿರುದ್ಧ ಮುಂದುವರೆಯುತ್ತದೆ. ಕಂಪನಿಗೆ ಬೇರೆ ಇತರೆ ಪರಿಹಾರ ಕಾಣದೆ ಯಾವುದೇ ಪೂರ್ವಾಗ್ರಹವಿಲ್ಲದೆ ನಿಮಗೆ ಈ ಸೂಚನೆಯನ್ನು ಹೊರಡಿಸಲಾಗಿದೆ.

ಕ್ರ. ಸಂ.	ಸಾಲಗಾರರ/ ಸಹ-ಸಾಲಗಾರರ ಹೆಸರು ಮತ್ತು ವಿಳಾಸ	ಫೈಲ್ ಸಂ. ಮೊತ್ತ (ಬಾಕಿ ಮೊತ್ತ ರೂ)	ಸ್ಥಿರಾಸ್ತಿಯ ವಿವರಣೆ
1	ಶ್ರೀ ಸಂದೀಪ್ ಭಗವಂತ್ ಗೋರೆ (ಸಾಲಗಾರ), ಬ್ಲಾಕ್ 5/6, ಪೊಲೀಸ್ ಕ್ವಾರ್ಟರ್ಸ್, ಹೆಬ್ಬಾಳ, ಬೆಂಗಳೂರು ಉತ್ತರ, ಎಚ್ ಎ ಫಾರ್ಮ್, ಹೆಬ್ಬಾಳ, ಬೆಂಗಳೂರು - 560024.	ಫೈಲ್ ಸಂ.BGM20210148, ರೂ. 3,44,914/- 05/03/2026ರಂದು ಇದ್ದಂತೆ) ಜೊತೆಗೆ ತದನಂತರದ ಬಡ್ಡಿ, ಕಾಸ್ಟ್ ಮತ್ತು ಇತರೆ ಛಾರ್ಜುಗಳು ಇತ್ಯಾದಿ ಪಾವತಿಯ ಯಥಾವತ್ ದಿನಾಂಕದವರೆಗೂ ಯಾವುದಾದರೂ ಇದ್ದಲ್ಲಿ)	ಸಕಲ ಸಮಸ್ತವೂ ಸೇರಿದ ವಸತಿ ಆಸ್ತಿ ಪ್ಲಾಟ್ ಸಂ.2 ಆರ್.ಎಸ್ ಸಂ.174ಎ/1, ಅಷ್ಟವಿನಾಯಕ ನಗರ, ನಿಪ್ಪಾಣಿ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ, ಬೆಳಗಾವಿ 591237, ಅಳತೆ 2324 ಚ.ಅ. ಮತ್ತು ಚಕ್ಕುಬಂದಿ- ಪೂರ್ವಕ್ಕೆ : ಪ್ಲಾಟ್ ಸಂ.3, ಪಶ್ಚಿಮಕ್ಕೆ: ಪ್ಲಾಟ್ ಸಂ.1, ಉತ್ತರಕ್ಕೆ: ಶ್ರೀಕೋಟಿವಾಲೆಯವರ ಭೂಮಿ, ದಕ್ಷಿಣಕ್ಕೆ: ರಸ್ತೆ.
2	ಶ್ರೀಮತಿ ಛಾಯಾ ಸಂತೋಷ್ ಗೋರೆ (ಸಹ-ಸಾಲಗಾರ) ಶ್ರೀಮತಿ ಗೋರೆ ಮೀನಾಕ್ಷಿ ಭಾಗವಂತ್ (ಸಹ-ಸಾಲಗಾರ)ಸಂ. 174/ಎ-1, ಪ್ಲಾಟ್ ಸಂ.2, ಅಷ್ಟ ವಿನಾಯಕ ನಗರ, ರಾಮ್ ನಗರದ ಹತ್ತಿರ, ನಿಪ್ಪಾಣಿ, ಚಿಕ್ಕೋಡಿ, ಬೆಳಗಾವಿ - 591237.	ಫೈಲ್ ಸಂ. BGM20200144, ರೂ. 7,17,494/- 05/03/2026ರಂದು ಇದ್ದಂತೆ) ಜೊತೆಗೆ ತದನಂತರದ ಬಡ್ಡಿ, ಕಾಸ್ಟ್ ಮತ್ತು ಇತರೆ ಛಾರ್ಜುಗಳು ಇತ್ಯಾದಿ ಪಾವತಿಯ ಯಥಾವತ್ ದಿನಾಂಕದವರೆಗೂ ಯಾವುದಾದರೂ ಇದ್ದಲ್ಲಿ)	
3		ಫೈಲ್ ಸಂ. BGM20200145, ರೂ.14,30,799/- 05/03/2026ರಂದು ಇದ್ದಂತೆ) ಜೊತೆಗೆ ತದನಂತರದ ಬಡ್ಡಿ, ಕಾಸ್ಟ್ ಮತ್ತು ಇತರ ಛಾರ್ಜುಗಳು ಇತ್ಯಾದಿ ಪಾವತಿಯ ಯಥಾವತ್ ದಿನಾಂಕದವರೆಗೂ ಯಾವುದಾದರೂ ಇದ್ದಲ್ಲಿ)	

ಸುಂದರಂ ಹೋಂ ಫೈನಾನ್ಸ್ ಲಿಮಿಟೆಡ್ ಪರವಾಗಿ
ಅಧಿಕೃತ ಅಧಿಕಾರಿ.
ದಿನಾಂಕ: 05-03-2026

PHODI APPEAL No. 1091/2025
BEFORE THE DEPUTY DIRECTOR OF LAND RECORDS BELAGAVI. AT: BELAGAVI
Between :
1) Riyazahmed S/o. Mohammedhanif Momin **...Appellant**
And
1) The PWD, Raibag, Tal: Raibag, Dist: Belagavi, Rp/by Assistant Engineer Raibag, and others **...Respondents**
To,
Respondent No.16: Mahantappa S/o. Sangappa Gubbewad, Since deceased, L.R's are not known, R/o: Momin Nagar, Raibag, Dist: Belagavi.
Respondent No.26: Safora Mastan Pathan, Since deceased, L.R's are not known, R/o: Momin Nagar, Raibag, Dist: Belagavi.
Respondent No.5A: Raju S/o. Vasant Chougule, R/o: Nipani Road, Chikkodi, Dist: Belagavi.
Respondent No.7: Bagwant S/o. Sankappa Jogal, R/o: Momin Nagar, Raibag, Dist: Belagavi.
Respondent No.11: Iqbal S/o. Abdulkarim Mulla, R/o: Momin Nagar, Raibag, Dist: Belagavi
Respondent No.13: Babasab S/o. Moula Jamadar, R/o: Momin Nagar, Raibag, Dist: Belagavi.
Respondent No.17: Shankar Mallappa Kamble, R/o: Shri Vijay Mahantesh Lalit Kala Mahavidyalaya, Hubballi.
Respondent No.18: Kamavati Manohar Kamble, R/o: Shri Nagar, Raibag, Dist: Belagavi.
Respondent No.22: Fatima Babasab Momin, R/o: Momin Nagar, Raibag, Dist: Belagavi.
Respondent No.23: Mamataj Kabeer Goundi, R/o: Momin Nagar, Raibag, Dist: Belagavi.
Respondent No. 28: Habibabi Kasim Momin, R/o: Momin Nagar, Raibag, Dist: Belagavi.
Respondent No. 29: Zakir Kasim Momin, R/o: Momin Nagar, Raibag, Dist: Belagavi.
Respondent No.40: Nandini Adunath Bhosale, R/o: Momin Nagar, Raibag, Dist: Belagavi.

SUIT SUMMONS UNDER ORDER V RULE 20 (1A) OF C.P.C.

The Appellant has filed Appeal Phodi for the cancellation of P.T. Sheet in respect of R.S.No. 476 situated at Raibag village, Tal: Raibag, Dist: Belagavi and you are the Respondents No. 16 and 26, Respondents No. 5A, 7, 11, 13, 17, 18, 22, 23, 28, 29 and 40 in the above said case. Hence you being above said Respondents are informed to appear in the court on 08/04/2026, personally or through Advocate duly instructed at 03:00 p.m., to participate in the above matter, failing which the matter will be heard and decided in accordance with law by placing you all ex-parte.

Given under my hand with the seal of this Hon'ble Court on this day of 25th March 2026.

By the Order of the Court
ಸಹಿ/– ಜಿಲ್ಲಾಧಿಕಾರಿಗಳ ಭೂಮಾಪನ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು ಬೆಳಗಾವಿ
Sd/- **Clerk,** DDLR Belagavi
Sd/- **(J. B. Patil)** (Seal)
Advocate for Appellant

ಭಾವಪೂರ್ಣ ಶ್ರದ್ಧಾಂಜಲಿ

ದಿ. ಶ್ರೀ ವೀರಭದ್ರಪ್ಪಾ ಗಂಗಪ್ಪಾ ಮಾದಮ್ಮನವರ (80)

ಸಾ: ಮಾರಿಹಾಳ ತಾ.ಜಿ: ಬೆಳಗಾವಿ

ಸಕಲ ಜೀವಾತ್ಮಕ್ಕೆ ಲೇಸನ್ನೆ ಬಯಸಿ, ಎಲ್ಲರೊಳಗೆ ಒಂದಾಗಿ ಸಮಾಜ ಸೇವೆಗೈಯುತ್ತಾ ನಾಡಿನಲ್ಲಿ ಹಲವಾರು ಮಂದಿರ ನಿರ್ಮಾಣಮಾಡಿ ಮಾರಿಹಾಳ ಕೋಡಿ ಬಸವೇಶ್ವರ ದೇವಸ್ಥಾನವನ್ನು ಸುಕ್ಷೇತ್ರ ಮಾಡುವಲ್ಲಿ ಪ್ರಮುಖ ಸ್ಥಾನವಹಿಸಿದ್ದ ದೈವಿಭಕ್ತರಾಗಿ, ಬೆಳಗಾವಿ ತಾಲೂಕಾ ಎಪಿಎಂಸಿ, ಟಿಎಪಿಸಿಎಮ್‌ಎಸ್ ನಿರ್ದೇಶಕರಾಗಿ, 4 ದಶಕಗಳ ಕಾಲ ಗ್ರಾಮದ ಪಿಕೆಪಿಎಸ್ ಅಧ್ಯಕ್ಷರಾಗಿ ರೈತರ ಸೇವೆಮಾಡಿ ಸಹಕಾರಿ ರಂಗಕ್ಕೆ ಮತ್ತು ಮನೆತನಕ್ಕೆ ನಂದಾದೀಪವಾಗಿದ್ದ **ನೀವು ಗುರುವಾರ ದಿ: 26-03-2026** ರಂದು ಮೃತ್ಯುಕೋಪದಿಂದಾದ ನಿಮ್ಮ ಅಗಲಿಕೆ ನಮ್ಮಗಷ್ಟೇ ಅಲ್ಲದೆ ಸಹಕಾರಿರಂಗಕ್ಕೂ ತುಂಬಲಾರದ ದುಃಖ ತಂದಿದೆ.

ಮೃತರ ಅಂತಿಮ ಕ್ರಿಯೆಯನ್ನು ಸ್ವ-ಗ್ರಾಮ ಬೆಳಗಾವಿ ಸಮೀಪದ ಮಾರಿಹಾಳ ಗ್ರಾಮದ ಸ್ವಂತ ಜಮೀನಿನಲ್ಲಿ ಇಂದು ಶುಕ್ರವಾರ ದಿ: 27-03-2026 ರಂದು ಮುಂಜಾನೆ 11 ಘಂಟೆಗೆ ನೆರವೇರಿಸಲಾಗುವದು.

ದುಃಖತಪ್ತರು

ಮಕ್ಕಳು: **ಶ್ರೀ ಬಸವರಾಜ ವಿ. ಮಾದಮ್ಮನವರ,** ಮಾಜಿ ಉಪಾಧ್ಯಕ್ಷರು ಹಾಗೂ ಹಾಲಿ ಗ್ರಾ.ಪಂ. ಸದಸ್ಯರು ಮಾರಿಹಾಳ
ಶ್ರೀ ಮಲ್ಲಿಕಾರ್ಜುನ ವಿ. ಮಾದಮ್ಮನವರ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳು ಬೆಳಗಾವಿ ಗ್ರಾಮಾಂತರ ಜಿಲ್ಲೆ, ಅಧ್ಯಕ್ಷರು ಪಿಕೆಪಿಎಸ್ ಮಾರಿಹಾಳ
ಶ್ರೀ ಸೋಮಶೇಖರ ವಿ. ಮಾದಮ್ಮನವರ, ಪ್ರಗತಿಪರ ರೈತರು
ಮಗಳು: **ಅಕ್ಕಮಹಾದೇವಿ ಕೋಂ. ರಾಜಶೇಖರ ಅಕ್ಕನ್ನವರ,** ಸವದತ್ತಿ
ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸರ್ವ ಸದಸ್ಯರು ಪಿಕೆಪಿಎಸ್, ಗ್ರಾಮ ಪಂಚಾಯತ ಸರ್ವ ಸದಸ್ಯರು ಮಾರಿಹಾಳ
ಮಾದಮ್ಮನವರ ಕುಟುಂಬವರ್ಗ ಮತ್ತು ಅಪಾರ ಬಂಧು-ಬಳಗ